ಸಾಹೇಬರು ಪಂಚಾಯತಿ ಚಾವಡ್ಯಾಗ ಕೂತಾರ. ನಿನ್ನೆ ಪಾಸ ಆದ ಠರಾವ ಬಗ್ಗೆ ಮಾತಾಡಲಾಕ ನಿಮಗ ಬರಲಾಕ ಹೇಳ್ಯಾರ".

ಅದಕ್ಕೆ ಪರಪ್ಪಜ್ಜ, "ನೋಡೋ ತಮ್ಮ, ನಾವ ಎಲ್ಲಿಗೂ ಬರಾಂಗಿಲ್ಲ. ಊರಿನ ಜಗಳ ಯಾವದ ಇರ್ಲಿ, ಈ ಕಟ್ಟೆ ಮ್ಯಾಲ ಬಗೆಹರಿಬೇಕ. ಅವ್ರ ಹೇಳ್ಯಾರಂತ ನಾವ ಅಲ್ಲಿಗೆ ಬರಾಕ ಆಗಂಗಿಲ್ಲ. ಅವ್ರಿಗೇ ಇಲ್ಲಿಗೆ ಬರಲಿಕ್ಕೆ ಹೇಳು" ಎಂದಾಗ ವಾಲೀಕಾರ ಬೇರೆ ದಾರಿ ಕಾಣದೆ ಅವರನೆಲ್ಲ ಕಟ್ಟೆಯ ಹತ್ತಿರ ಕರೆದುಕೊಂಡು ಬಂದ.

ಪಂಚಾಕ್ಷರಿ ಜೊತೆಗೆ ಇನ್ನೂ ನಾಲ್ಕಾರು ಪಂಚಾಯತಿ ಸದಸ್ಯರು, ಸೆಕ್ರೆಟರಿ ಇದ್ದರು. ಅದರಲ್ಲಿ ಪರಿಚಿತ ಸದಸ್ಯನನ್ನು ಉದ್ದೇಶಿಸಿ ವಿಶ್ವ ಕೇಳಿದ, "ಏನೋ ನಾಗರಾಜ ಇದು, ಊರಾಗ ಎಷ್ಟೊಂದು ರಾಡಿ ಎದ್ದದಲ".

"ಅದನ ಚೇರಮನ್ರ ಹೇಳಬೇಕರಿ" ಎಂದು ಪಂಚಾಕ್ಷರಿಯತ್ತ ಮುಖ ಮಾಡಿ ಹೇಳಿದಾಗ ಅವನು, "ರಾಡಿ ಪ್ರಶ್ನೆ ಏನ ಬಂತು. ಊರಾಗ ಮಂಗಲ ಭವನ ಕಟ್ಟಿಸೋದು ರಾಡಿ ಅಂತ ತಿಳ್ಕೊಂಡ್ರ ನಾವೇನ ಮಾಡ್ಲಾಕ ಆಗ್ತದ. ಊರ ಉದ್ಧಾರ ಆಗ್ಲಿ ಅಂತ, ಜನಕ್ಕ ಅನುಕೂಲ ಆಗಲೆಂತ ಮಂಗಲ ಭವನ ಕಟ್ಟಿಸಲಾಕ ಹೋದ್ರ ತಲಿಗೊಂದು ಮಾತಾಡಿದ್ರ ಏನು ಮಾಡೂದು" ಎಂದ.

"ಪಂಚಾಕ್ಷರಿ, ಇಲ್ಲಿ ತಲಿಗೊಂದು ಮಾತಾಡಾಕ ದಾರಿ ಮಾಡಿ ಕೊಟ್ಟೋರು ಯಾರು ಅನ್ನೂದು ನಿನಗ ಗೊತ್ತ ಅದ. ಅಲ್ಲ, ಇಗಾಗ್ಲೆ ಊರಾಗಿರೊ ಸಮುದಾಯ ಭವನದ ಮೇಲ್ಛಾವಣಿ ಬಿದ್ದು ಹೋಗಲಿಕ ಹತ್ತೆತಿ. ಮದ್ಲ ಅದನ ದುರಸ್ತಿ ಮಾಡ್ರಿ. ಅದು ಪೂರಾ ಹಾಳು ಬಿದ್ದ ಅದಕ ಹಾವು, ಚೇಳು ಸೇರೊಕ್ಕಿಂತ ಮುಂಚೆ ಅದನ್ನೆಲ್ಲ ರಿಪೇರಿ ಮಾಡಿಸ್ರಿ. ಅದನ್ನೆಲ್ಲ ಬಿಟ್ಟು ಹೊಸದಾಗಿ ಮತ್ತೊಂದು ಕಟ್ತೆವಿ ಅಂತ ಅನ್ನೂದು ಮಳ್ಳತನ ಆಗ್ತದ" ಎಂದ ವಿಶ್ವ.

ಅದಕ್ಕೆ ಪಂಚಾಕ್ಷರಿ, "ಊರಿನ ಜನರ ಬಗ್ಗೆ ಕಳಕಳಿ ಇದ್ದೋರು ಮಾತಾಡು ಮಾತ ಇದು" ಎಂದಾಗ ಅಷ್ಟರಲ್ಲಾಗಲೆ ಪರಪ್ಪಜ್ಜ, "ನೋಡು ಜನರ ಕಳಕಳಿ ಬಗ್ಗೆ ನೀ ಹೇಳಬೇಕಾಗಿಲ್ಲ. ನೀನು ಊರಿಗೆ ಒಳಿತ ಮಾಡೋ ಹಂಬಲ ಇದ್ರ ಇಡೀ ಹಳ್ಳಿಯನ್ನು ಮಳೆ ಗಾಳಿಯಿಂದ ರಕ್ಷಣಾ ಮಾಡ್ತದಲ ಈ ಆಲದ ಮರ, ಅಷ್ಟ ಅಲ್ಲದ ಚಳವಳಿ ಕಾಲದಾಗ ಎಷ್ಟೋ ದೇಶಭಕ್ತರ ಪ್ರಾಣ ಕಾಪಾಡಿದೆ. ಮತ್ತ ಊರಿನ ಜಗಳ ಬಗೆಹರಿಸಿ ಎಷ್ಟೋ ಸಂಸಾರನ ಒಂದ ಮಾಡಿದ ಈ ಕಟ್ಟೆ ಒಂದು ದೇವಸ್ಥಾನ ಇದ್ದಂಗ. ಇದನ್ನೆಲ್ಲ ಮರೆತ ಇದ್ನ ಕಡಿದು ಮಂಗಲ ಭವನ ಕಟ್ಟಿಸ್ತೆನಂದ್ರ ಅದು ನನ್ನ ಹೆಣದ ಮ್ಯಾಗ ಎಲ್ಲಾರು ತಿಳ್ಕೊಳ್ರಿ" ಎಂದು ಆವೇಶದಿಂದ ಹೇಳಿದನು.

"ಊರಾಗ ಏನಾರ ಒಂದ ಸುಧಾರಣಾ ಮಾಡಬೇಕಂದ್ರ ಆಳಿಗೊಂದು ಮಾತಾಡ್ತಿರಿ, ಮ್ಯಾಲ ಚೇರಮನ್ರು ಏನು ಕೆಲಸ ಮಾಡೂದಿಲ್ಲ ಅಂತಿರಿ" ಹಾಗೆಂದು ಪಂಚಾಕ್ಷರಿ ಹೇಳುತ್ತಿದ್ದಂತೆ ವಿಶ್ವ ಕೂಡಲೆ ಎದ್ದು ನಿಂತು – "ಏ ಪಂಚಾಕ್ಷರಿ, ನೀನ ಎಷ್ಟರಮಟ್ಟಿಗೆ ಊರ ಸುಧಾರಣ ಮಾಡಿದಿ ಅನ್ನೂದು ಇಲ್ಲಿರೋ ಕೂಸು ಕುನ್ನಿಗೂ ಗೊತ್ತದ. ಸುಧಾರಣ ಅಂತ ಹೇಳಿ ಈಗಾಗ್ಲೆ ಊರಾಗ ಒಂದ ದೊಡ್ಡ ಭವನ ಇದ್ರೂ ಮತ್ತೊಂದು ಕಟ್ಟಿಸಲಾಕ ನಿಂತೀಯಲ, ಮತ್ತೊಂದು ಕಟ್ಟೋ ಅವಶ್ಯಕತಾ ಆಗ್ಲಿ ಅಥವಾ ಹರಕತ್ ಆಗ್ಲಿ ಏನದ ಈಗ. ಅಲ್ಲೇ ಮದುವಿ, ಮುಂಜವಿ ಕಾರ್ಯಕ್ರಮ ಮಾಡಾಕ ಬ್ಯಾಡ ಅಂತಾರನ ಯಾರರಾ... ಆಯ್ತು, ಅಷ್ಟೊಂದು ನಿಂಗ ಕಾಳಜಿ ಇದ್ರ, ಕಟ್ಟಿ ಮಗ್ಗಲ ಸರ್ಕಾರಿ ಜಮೀನು ಅದ ದವಾಖಾನಿ ಕಟ್ಟಿಸು, ಎಷ್ಟೋ ಬಡಬಗ್ಗರಿಗೆ ಅನುಕೂಲ ಆಗ್ತದ. ಮೂರು ವರ್ಷದಿಂದ ಊರಾಗ ಬರ ಐತಿ. ನಮ್ಮೂರ ಹೆಣ್ಮಕ್ಕಳು ಬಿಸಿಲ ಅನ್ನದ ಒಂದು ಮೈಲು ಹೋಗಿ ನೀರ ತರ್ತಾರ. ಅದಕ ಏನಾರ ವ್ಯವಸ್ಥಾ ಮಾಡು. ಪುಣ್ಯಾನಾದ್ರೂ ಬರ್ತದ. ಸರ್ಕಾರ ಒಂದೇ ಸಮನ ಗಿಡ ಹಚ್ಚರಿ, ಬರ ಅಳಿಸರಿ ಅಂತ ಕೂಗಾಕ ಹತ್ತೇದ. ಅಂತಾದರಲ್ಲಿ ಇದ್ದ ಗಿಡ ಕಡಿದು ಮತ್ತೊಂದ